ದೇವಿಗೆ ಪ್ರಾರ್ಥಿಸಿಕೊಂಡನು. ಪುನಃ ತನ್ನ ರಾಜ್ಯವನ್ನು ತಾನು ಮತ್ತೆ ಪಡೆದುಕೊಳ್ಳುವಂತೆ ಮಾಡಬೇಕೆಂದೂ ಬೇಡಿಕೊಂಡನು. ಈ ಬೇಡಿಕೆಗಳು ಈಡೇರಿದರೆ, ದೇವಿಗೊಂದು ದೇವಸ್ಥಾನವನ್ನು ಕಟ್ಟಿಸುವೆನೆಂದು ಸಂಕಲ್ಪ ಮಾಡಿದನು. ದೇವಿಯು ರಾಜ ವಿಶ್ವಸಿಂಹನ ಪ್ರಾರ್ಥನೆಯನ್ನು ಈಡೇರಿಸಿದಳು. ರಾಜನು ದೇವಿಯ ಅನುಗ್ರಹವನ್ನು ಪಡೆದು ಕೃತಾರ್ಥನಾದನು. ಮಣ್ಣಿನ ಸ್ತೂಪವನ್ನು ಅಗೆಸಿ, ದೇವಿಯ ಮಂಡಲವಿರುವ ಜಾಗವನ್ನು ಕಂಡುಹಿಡಿದನು. ಅಲ್ಲಿ ದೇವಸ್ಥಾನವನ್ನು ಕಟ್ಟಿಸಿದನು. ವಿಧಿವಿಧಾನದಂತೆ ಪೂಜೆಯ ಏರ್ಪಾಡನ್ನು ಮಾಡಿದನು. ತನ್ನ ರಾಜ್ಯದಲ್ಲಿ ದೇವಿಯ ಮಾಹಾತ್ಮ್ಯೆಯನ್ನು ಪ್ರಚುರಪಡಿಸಿದನು.

ವಿಶ್ವಸಿಂಹನಿಗೆ ಇಬ್ಬರು ಪುತ್ರರು : ನರನಾರಾಯಣ ಮತ್ತು ಚೀಲಾರಾಯ್. ತಮ್ಮ ತಂದೆಯ ಕಾಲವಾದ ನಂತರ, ಇಬ್ಬರೂ ಕೂಡಿ ರಾಜ್ಯವನ್ನು ಇನ್ನೂ ವಿಸ್ತರಿಸಿದರು. ಇವರು ಕಾಮಾಖ್ಯ ದೇವಿಯ ಪರಮಭಕ್ತರಾಗಿದ್ದರು. ದೇವಿಯ ನಿತ್ಯಪೂಜೆಗೆ, ಉಳಿದ ಕಾರ್ಯಗಳಿಗೆ ಅಪಾರ ಧನವನ್ನು ನೀಡಿದರು; ವಿಸ್ತಾರವಾದ ಭೂಮಿಯನ್ನು ಬಳುವಳಿಯಾಗಿ ಕೊಟ್ಟರು. ಇದಲ್ಲದೆ, ಮಿಥಿಲಾ, ನವದ್ವೀಪ ಮತ್ತು ವಂಗದೇಶಗಳಿಂದ ಬ್ರಾಹ್ಮಣರನ್ನು ಕರೆಸಿ, ಅವರಿಗೆ ದೇವಸ್ಥಾನದ ಪಕ್ಕದಲ್ಲಿಯೇ ವಸತಿಯನ್ನು ಮಾಡಿಕೊಟ್ಟರು. ದೇವಿಯ ಪೂಜೆ, ನೈವೇದ್ಯ ಮುಂತಾದ ಕಾರ್ಯಗಳಿಗೆ ಅವರನ್ನು ನೇಮಿಸಿದರು. ಹೀಗೆ ಅನೇಕ ವರ್ಷಗಳು ಕಳೆದವು. ಈ ಮಧ್ಯೆ ದೈವವಶದಿಂದ ನರನಾರಾಯಣನು ಕೆಟ್ಟ ಬುದ್ಧಿಯವನಾಗಿ, ದೇವಿಯ ಕೋಪಕ್ಕೆ ಗುರಿಯಾಗಿ ಶಾಪಗ್ರಸ್ತನಾದನು. ಇದರಿಂದ ಕೂಚ್‌ಬಿಹಾರಿನ ರಾಜವಂಶದವರಿಗೆ ಕಾಮಾಖ್ಯ ಮಂದಿರದ ಆಧಿಪತ್ಯ ತಪ್ಪಿ ಹೋಯಿತು. ಈಗಲೂ ಆ ವಂಶದವರಿಗೆ ದೇವಾಲಯದ ಪ್ರವೇಶ ನಿಷಿದ್ಧವಾಗಿದೆ.

ಅನಂತರ 'ಅಹೋಂ' ವಂಶದ ರಾಜರು ಅಸ್ಸಾಂ ರಾಜ್ಯವನ್ನು ಆಳಿದರು. ಅವರೂ ಕೂಡ ಕಾಮಾಖ್ಯ ದೇವಿಯ ಭಕ್ತರಾಗಿದ್ದರು. ಅವರು ಪೀಠಸ್ಥಾನವನ್ನು ಸ್ಥಾಪಿಸಲು ಭೂಮಿಯನ್ನೂ, ಧನವನ್ನೂ ದಾನ ಮಾಡಿದರೆಂಬ ಐತಿಹ್ಯವಿದೆ.

ನೀಲಾಚಲ ಪರ್ವತದಲ್ಲಿ ಕಾಮಾಖ್ಯ ದೇವಸ್ಥಾನವೇ ಪ್ರಧಾನ. ಇದರೊಂದಿಗೆ ದೇವಿಯ ದಶಮಹಾವಿದ್ಯಾರೂಪಗಳಾದ ಕಾಳಿ, ತಾರಾ, ಭೈರವಿ, ಭುವನೇಶ್ವರಿ, ಛಿನ್ನಮಸ್ತಾ, ಧೂಮಾವತಿ, ಬಗಲಾ, ಮಾತಂಗಿ, ಕಮಲಾ ಮತ್ತು ಷೋಡಶಿಯರ ಪೂಜಾ ಸ್ಥಾನಗಳೂ ಇಲ್ಲಿವೆ. ಹಾಗೆಯೇ ನೀಲಾಚಲ ಪರ್ವತದಲ್ಲಿ ಏಳು ಶಿವದೇವಾಲಯಗಳೂ ಇವೆ.

ಕಾಮಾಖ್ಯ ದೇವಿಯ ಪತಿ 'ಉಮಾನಂದ ಭೈರವ'ನ ದೇವಸ್ಥಾನ ಸಮೀಪದಲ್ಲಿಯೇ ಹರಿಯುತ್ತಿರುವ ಬ್ರಹ್ಮಪುತ್ರ ನದಿಯ ಮಧ್ಯೆ ಇರುವ ಒಂದು ಸಣ್ಣ ದ್ವೀಪದಲ್ಲಿದೆ. ಈ ಸ್ಥಳಕ್ಕೆ 'ಭಸ್ಮಾಚಲ' ಅಥವಾ 'ಭಸ್ಮಕೂಟ' ಎನ್ನುತ್ತಾರೆ. ಇಲ್ಲೇ ಶಿವನು ಕಾಮದೇವನನ್ನು ಭಸ್ಮಮಾಡಿದನೆಂಬ ನಂಬಿಕೆ ಇದೆ. ಉಮೆಗೆ ಪ್ರಿಯನಾದವನಾದ್ದರಿಂದ ಇಲ್ಲಿ ಶಿವನನ್ನು 'ಉಮಾನಂದ' ಎಂದು ಕರೆದು ಪೂಜಿಸುತ್ತಾರೆ.

ಕಾಮಾಖ್ಯ ಮಹಾಶಕ್ತಿ ಪೀಠದಲ್ಲಿ ಪೂಜೆ, ಬಲಿ, ಅರ್ಚನೆಗಳು ನಿತ್ಯವೂ ನಡೆಯುತ್ತವೆ. ಹಾಗೆಯೇ ವಿಶೇಷವಾಗಿ 'ಕುಮಾರಿ ಪೂಜೆ'ಯೂ ನಡೆಯುತ್ತದೆ. 'ಅಂಬುವಾಚಿ' ಎಂದು ಕರೆಯುವ ಇಲ್ಲಿನ ವಾರ್ಷಿಕ ಉತ್ಸವ ಪ್ರಸಿದ್ಧವಾದುದು. 'ಅಂಬು' ಎಂದರೆ ನೀರು. 'ವಾಚಿ' ಎಂದರೆ ವಾಕ್ ಅಥವಾ ಮಾತು. ಇದು ಮುಖ್ಯವಾಗಿ ಭೂದೇವಿಯನ್ನು ಕುರಿತ ಉತ್ಸವ. ತಮ್ಮ ಆರಾಧ್ಯದೇವತೆಯಾದ ಕಾಮಾಖ್ಯದೇವಿಯೇ ಭೂಮಿತಾಯಿ ಎಂಬ ನಂಬಿಕೆಯಿಂದ, ಈ ಶಕ್ತಿಪೀಠದಲ್ಲಿಯೇ ಮೂರು ದಿನಗಳ ಕಾಲ ಉತ್ಸವವನ್ನು ಜನರು ಆಚರಿಸುತ್ತಾರೆ. ದೇವಾಲಯದ ಹೊರಗಿನ ವಿಶಾಲವಾದ ಪ್ರಾಂಗಣದಲ್ಲಿ ನೂರಾರು ಜನರು ಸೇರುತ್ತಾರೆ. ಅಲ್ಲಿ, ಜಪ, ಧ್ಯಾನ, ಅರ್ಚನೆ, ಕೀರ್ತನೆಗಳು ನಿರಂತರವಾಗಿ ನಡೆಯುತ್ತವೆ. ಸಾಧುಸಂತರೂ ಇದರಲ್ಲಿ ಪಾಲ್ಗೊಳ್ಳುತ್ತಾರೆ.

ಈ ಮೂರು ದಿನಗಳ ಕಾಲ ಗರ್ಭಮಂದಿರವನ್ನು ಮುಚ್ಚಿರುತ್ತಾರೆ. ಅನಂತರ ತೆರೆಯುತ್ತಾರೆ. ಆಗ ಭಕ್ತರು ದೇವಸ್ಥಾನದ ಪ್ರಾಕಾರದಲ್ಲಿರುವ ಏಳು ಕೊಳಗಳಲ್ಲಿ ಮುಖ್ಯವಾದ 'ಸೌಭಾಗ್ಯ ಕೊಳ'ದಲ್ಲಿ ಸ್ನಾನ ಮಾಡಿ, ದೇವಿಯ ದರ್ಶನವನ್ನು ಪಡೆದು ತಮ್ಮ ವ್ರತವನ್ನು ಸಂಪನ್ನಗೊಳಿಸುತ್ತಾರೆ.

ಸ್ವಾಮಿ ವಿವೇಕಾನಂದರು ತಮ್ಮ ತಾಯಿಯಾದ ಭುವನೇಶ್ವರಿ ದೇವಿಯೊಡನೆ ಕಾಮಾಖ್ಯ ದೇವಸ್ಥಾನಕ್ಕೆ ಬಂದಿದ್ದರು. ಮೂರು ದಿವಸಗಳ ಕಾಲ ಇಲ್ಲಿದ್ದು, ದೇವಿಯನ್ನು ಆರಾಧಿಸಿದರು. ಅವರು ತಂಗಿದ್ದ ಒಬ್ಬ ಅರ್ಚಕರ ಮನೆ ಮತ್ತು ಆ ದಿನಗಳಂದು ಸ್ವಾಮೀಜಿ ಉಪಯೋಗಿಸಿದ ಉಪಕರಣಗಳನ್ನು ಇಂದಿಗೂ ಕಾಣಬಹುದು.

ಹೀಗೆ ಭಕ್ತರ ಇಷ್ಟಾರ್ಥವನ್ನು ನೆರವೇರಿಸುತ್ತಿರುವ ಕಾಮಾಖ್ಯದೇವಿಯು ಸಾಧುಸಂನ್ಯಾಸಿಗಳ ತಪೋಜೀವನಕ್ಕೂ ಶಕ್ತಿದಾಯಕಳಾಗಿದ್ದಾಳೆ. ಸರ್ವಸಿದ್ಧಿದಾತ್ರಿಯಾದ ಕಾಮಾಖ್ಯ ದೇವಿಯು ನಮ್ಮೆಲ್ಲರನ್ನೂ ಅನುಗ್ರಹಿಸಲಿ! ⌘



## ಕ್ರಿಯಾರೂಪಿ ವಿವೇಕಾನಂದ

**(ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ – 2014)**

**ವಿವೇಕಪ್ರಭ ಪತ್ರಿಕೆಯ ವತಿಯಿಂದ ವಿವೇಕಾನಂದರ 150ನೇ ಜಯಂತಿ ಮಹೋತ್ಸವದ ಅಂಗವಾಗಿ 'ಕ್ರಿಯಾರೂಪಿ ವಿವೇಕಾನಂದ' (Vivekananda in Action) ವಿಷಯವನ್ನು ಕುರಿತು ವಿಶೇಷ ಸಂಚಿಕೆ ಪ್ರಕಟವಾಗಲಿದೆ. ಇದರಲ್ಲಿ ಸ್ವಾಮಿ ವಿವೇಕಾನಂದರ ಅನುಷ್ಠಾನಪ್ರದ ಸಂದೇಶಗಳ ಬಗ್ಗೆ ವಿಶ್ಲೇಷಣೆಯಲ್ಲದೆ, ರಾಮಕೃಷ್ಣ ಮಹಾಸಂಘದ ಹಲವಾರು ಕೇಂದ್ರಗಳ ಸೇವಾಕಾರ್ಯಗಳ ವಿವರವನ್ನೂ ಪ್ರಕಟಿಸಲಾಗುವುದು. ಇದಲ್ಲದೆ, ಇತರ ಸೇವಾಸಂಸ್ಥೆಗಳು ನಡೆಸುತ್ತಿರುವ ಸೇವಾಕಾರ್ಯಗಳ ಬಗ್ಗೆ ಪರಿಚಯಾತ್ಮಕ ಲೇಖನಗಳೂ ಇರುತ್ತವೆ.**

**ಓದುಗರಲ್ಲಿ ನಮ್ಮ ಮನವಿ ಇದು: ತಾವು ಸ್ವಾಮಿ ವಿವೇಕಾನಂದರಿಂದ ಪ್ರೇರಿತರಾಗಿ ಯಾವುದಾದರೂ ಸೇವಾಕಾರ್ಯವನ್ನು ನಡೆಸುತ್ತಿದ್ದರೆ, ಅದರಲ್ಲಿನ ನಿಮ್ಮ ಅನುಭವವನ್ನು ಒಂದು ಪುಟದ ಒಳಗೆ ಬರೆದು ಕಳಿಸಿ. ಸ್ವಂತ ಅನುಭವಗಳನ್ನು ಮಾತ್ರ ಪ್ರಕಟಿಸಲಾಗುವುದು. ತಮ್ಮ ಬರಹ ನಮಗೆ ಸೇರಬೇಕಾದ ಅಂತಿಮ ದಿನಾಂಕ : 1. 11. 2013** *– ಸಂ.*

# “ದೇವಿಯೇ ದೇವಿಯೆದುರು ಕೂರುವುದೆ ಹೀಗೆ!”



**ಸ್ವಾಮಿ ಶಿವಾತ್ಮಾನಂದ**

**ಶ್ರೀಮಾತೆ ಶಾರದಾದೇವಿಯವರು ತೀವ್ರ ಅನಾರೋಗ್ಯದಿಂದ ನರಳುತ್ತಿದ್ದಾಗ, ಜಯರಾಂಬಾಟಿಯ ಗ್ರಾಮಾಧಿದೇವತೆ ಸಿಂಹ ವಾಹಿನಿಯ ಮೊರೆಹೋಗಿದ್ದರು. ಈ ಪ್ರಸಂಗವನ್ನು ಭಾವಪೂರ್ಣವಾಗಿ, ಕಾವ್ಯಮಯ ಭಾಷೆಯಲ್ಲಿ ಅಭಿವ್ಯಕ್ತಿಸಿರುವ ಲೇಖಕರು ಶ್ರೀರಾಮಕೃಷ್ಣ–ವಿವೇಕಾನಂದರ ಅಧ್ಯಾತ್ಮ ಮಾರ್ಗದ ಸಾಧಕ ಸಂನ್ಯಾಸಿಗಳು. ದಿವ್ಯತ್ರಯರ ಸಾಹಿತ್ಯದಲ್ಲಿ ಕಥೆಗಳಾಗುವಂತಿರುವ ಘಟನಾವಳಿಗಳನ್ನು ಸೃಜನಾತ್ಮಕತೆಯೊಂದಿಗೆ ರಚನೆಯಲ್ಲಿ ತರುವ ಪ್ರಯತ್ನದಲ್ಲಿ ಇವರ ಮೊದಲ ಕಥೆ ಇದು.**

**ಬಿಂ**ಬ ಕೆರೆಯ ಜಲದೊಳಗೆ ಪ್ರತಿಬಿಂಬಗೊಳ್ಳುತ್ತಿದೆ. ಶ್ರೀಮಾತೆ ದೃಷ್ಟಿಸಿ ನೋಡುತ್ತಾರೆ, “ಅರೆ! ಇದೇನು ಕಾಣುತ್ತಿದೆ? ಯಾರ ರೂಪವಿದು!..” ಒಂದು ಕ್ಷಣ ಅನುಮಾನ. “ಇದು ನನ್ನದೇ ಬಿಂಬವೇ, ಅಥವಾ...” ಮತ್ತೆ ಮತ್ತೆ ದೃಷ್ಟಿ ಆ ಪ್ರತಿಬಿಂಬದತ್ತಲೇ ನೆಟ್ಟಿದೆ. “ಹೌದು, ಇದು ನನ್ನದೇ ರೂಪ! ಹೇಗಾಗಿಬಿಟ್ಟಿದೆ ಈ ಶರೀರ.. ಅಯ್ಯೋ! ಆಮಶಂಕೆಯ ಬಾಧೆಗೆ ತುತ್ತಾದ ಶರೀರ ಹೀಗೆ ಗುರುತೇ ಸಿಗದಂತೆ ಬದಲಾಗಿಹೋಗಿದೆ!... ಈ ಶರೀರವೆಂದರೆ ಇಷ್ಟೇ, ಮೂಳೆಗಳ ಮೇಲೆ ಚರ್ಮದ ಹೊದಿಕೆ! ಇದಕ್ಕೇ ಶ್ರೀರಾಮಕೃಷ್ಣರು ದೇಹದ ಮೇಲೆ ವ್ಯಾಮೋಹ ಇರಬಾರದು ಎಂದು ಮತ್ತೆ ಮತ್ತೆ ಹೇಳುತ್ತಿದ್ದುದು..”

ಶ್ರೀಮಾತೆ ಶಾರದಾದೇವಿಯವರು ತಮ್ಮ ಶರೀರವನ್ನು ಕಾಡುತ್ತಿದ್ದ ಆಮಶಂಕೆಯ ಬಾಧೆಯಿಂದ ಶೌಚಕ್ಕಾಗಿ ಮತ್ತೆ ಮತ್ತೆ ನಡೆದಾಡಲಾಗದ ನಿಶ್ಶಕ್ತತೆಯ ಸ್ಥಿತಿಯಲ್ಲಿ ಇದ್ದರು. ತಮ್ಮ ಮನೆಗೆ ಸಮೀಪದ ಕೆರೆಯ ದಂಡೆಯಲ್ಲಿಯೇ ಕುಳಿತು, ಶರೀರವನ್ನು ಕಾಡುತ್ತಿರುವ ಬಾಧೆಯನ್ನು ತಮ್ಮಲ್ಲಿಯೇ ಪರಿಶೀಲಿಸುತ್ತ ಅಂತರ್ಮುಖಿಯಾಗಿದ್ದರು. ಆಗ ಕೆರೆಯ ಜಲದಲ್ಲಿ ಕಾಣಬಂದ ತಮ್ಮ ಬಸವಳಿದ ಶರೀರದ ರೂಪವನ್ನು ಕಂಡು, ತಮ್ಮೊಳಗೆ ಒಮ್ಮೆಗೇ ಮೂಡಿದ ಅಚ್ಚರಿ ಹಾಗೂ ದಿಗಿಲಿನಲ್ಲಿ ತಮ್ಮ ಪ್ರತಿಬಿಂಬವನ್ನೇ ಮತ್ತೆ ಮತ್ತೆ ದೃಷ್ಟಿಸುತ್ತಿದ್ದರು. ಹೀಗೆ ಮಾಡುವಾಗ ತಮ್ಮ ಹೃದಯದ ಆರಾಧ್ಯದೈವ ಶ್ರೀರಾಮಕೃಷ್ಣರ ನೆನಪಿನಲ್ಲಿಯೇ ಮುಳುಗಿಹೋಗಿದ್ದರು. ಶ್ರೀರಾಮಕೃಷ್ಣರು ತಮ್ಮ ಶಕ್ತಿರೂಪಿಣಿ ಶ್ರೀಮಾತೆಯವರಿಗೆ ಕಾಡುತ್ತಿರುವ ಈ ಆಮಶಂಕೆಯ ಬಾಧೆಯ ಸುದ್ದಿಯನ್ನು ಕೇಳಿ ಆತಂಕದಲ್ಲಿ ಮುಳುಗಿ, “ಓ ಹೃದೆ, ಇದೇನು ಹೀಗಾಗುತ್ತಿದೆ! ಮಾನವಳಾಗಿ ಹುಟ್ಟಿ ಈ ಜನ್ಮಕ್ಕೆ ಯೋಗ್ಯವಾದ ಏನನ್ನೂ ಸಾಧಿಸದೆ ಹೋಗುವುದೇ ಆಕೆಯ ವಿಧಿಯೇ?” ಎಂದು ಅತ್ತ ದಕ್ಷಿಣೇಶ್ವರದಲ್ಲಿ ಹೃದಯರಾಮನೊಂದಿಗೆ ಉದ್ಗರಿಸುತ್ತಿದ್ದರು. ಅದೇ ಮುಹೂರ್ತದಲ್ಲಿ ಇತ್ತ ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಆಂತರ್ಯದೊಳಗೂ ಒಂದು ಬಗೆಯ ವಿಚಲಿತತೆ ಮೂಡಿತ್ತು. ಅವರು ಹೀಗೆ ಭಾವಿಸುತ್ತಿದ್ದಾರೆ: “ಈ ಶರೀರ ಎನ್ನುವುದರ ಹಣೆಬರಹ ಇಷ್ಟೇ! ಎಷ್ಟು ಉಪಚರಿಸಿದರೂ ಇದು ತನ್ನ ಆಟದೊಳಗೇ ಮುಳುಗುತ್ತದೆ. ಇದರ ಮೇಲಿನ ವ್ಯಾಮೋಹ ತೊರೆದು ಇಲ್ಲಿಯೇ ಇದನ್ನು, ಈ ಅವಸ್ಥೆಯಲ್ಲಿಯೇ ತೊರೆದು ಹೋಗಲು ಸಿದ್ಧಳಾಗುತ್ತೇನೆ. ಬಿದ್ದಿರಲಿ ಇದು ಇಲ್ಲಿಯೇ!”

ಶರೀರದ ಹಂಗು ತೊರೆದು ಆ ಕೆರೆಯ ದಡದಲ್ಲಿಯೇ ಅದನ್ನು ಶ್ರೀಮಾತೆ ಉರುಳಿಸಿದರು! ಆದರೆ ಇಲ್ಲೇ ಜನ್ಮತಳೆದ ಈ ಮಹಾಚೇತನಾತ್ಮ ಶಕ್ತಿ ಹೀಗೆ ಆ ಕೆರೆಯ ದಡದಲ್ಲಿ ಉರುಳಿ ಬೀಳಲು ಜಯರಾಂಬಾಟಿಯ ಅಧಿದೇವತೆ ಹೇಗೆತಾನೇ ಬಿಟ್ಟಾಳು? ಶ್ರೀಮಾತೆಯವರ ತಮ್ಮ ಉಮೇಶ ಆ ಕ್ಷಣದಲ್ಲಿ ಅತ್ತ ಬಂದ, ಅಶ್ವಿನಿದೇವನಂತೆ ನುಡಿದ, “ಏನಿದಕ್ಕ, ಹೀಗೆ ಇಲ್ಲೇ ನರಳಾಡುತ್ತೀಯೆ? ಇಲ್ಲೇ ಸಿಂಹವಾಹಿನಿದೇವಿ ಇದ್ದಾಳಲ್ಲ, ಅವಳಿಂದಾಗದ್ದು ಯಾವುದಿದೆ? ಅವಳ ಮುಂದೆ ಉಪವಾಸವ್ರತಕ್ಕೆ ಕುಳಿತು ನೋಡು. ಗುಣವಾಗುತ್ತದೆಯೋ ಇಲ್ಲವೋ, ನಿನಗೇ ಗೊತ್ತಾಗುತ್ತದೆ!”

“ಹೌದಲ್ಲವೇ, ಎಂಥ ಸೂಚನೆ ಕೊಡುತ್ತಿದ್ದಾನೆ ಈ ಉಮೇಶ! ಚಿಕ್ಕವನ ಬಾಯಲ್ಲಿ ಇಂಥ ಮಾತನ್ನು ಆ ಸಿಂಹವಾಹಿನಿಯೇ ನುಡಿಸುತ್ತಿದ್ದಾಳಲ್ಲವೇ! ಈ ಗ್ರಾಮದ ಅಧಿದೇವಿಗೆ ಗ್ರಾಮವಾಸಿಗಳ ಸಂಕಷ್ಟಗಳ ನಿವಾರಣೆ ತಿಳಿಯದಿದ್ದೀತೇ? ಅವಳ ಸನ್ನಿಧಿಯಲ್ಲಿ ವ್ರತ ಹಿಡಿಯುವುದೇ ಈ ರೋಗ ನಿವಾರಣೆಗೆ ಸರಿಯಾದ ಉಪಾಯ” – ಹೀಗೆ ನಿರ್ಧರಿಸಿದರು ಶ್ರೀಮಾತೆ.